# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 160/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಖಲೀಲ್ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಮಹಮದ್ ಬಷೀರ್ | | 08.01.2024 |
| ವಯಸ್ಸು | ಃ 52 ವರ್ಷ | | |
| ವೃತ್ತಿ | ಃ ಸೂಪರ್ ವೈಸರ್, ಅದ್ವೈತ ರೆಸಿಡೆನ್ಸಿ | ಪ್ರಾ.ಸಾ. ಃ 02 | |
| ವಾಸಸ್ಥಳ | ಃ ಮೈಸೂರು | ಚಾ.ಸಾ. ಃ 02 | |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಕಳೆದ 3 ವರ್ಷಗಳಿಂದ ಅದ್ವೈತ ರೆಸಿಡೆನ್ಸಿ ಲಾಡ್ಜ್ ನಲ್ಲಿ ಹೌಸ್ ಕೀಪಿಂಗ್ ಸೂಪರ್ ವೈಸರ್ ಆಗಿ ಕೆಲಸ ಮಾಡುತ್ತಿದ್ದೇನೆ. ಡಿಸೆಂಬರ್ 2021 ರಲ್ಲಿ ಮೃತ ಪ್ರಜ್ವಲ್ ನು ಆ ಲಾಡ್ಜ್ ನಲ್ಲಿ ರೂಂ ಬಾಯ್ ಆಗಿ ಕೆಲಸಕ್ಕೆ ಸೇರಿಕೊಂಡಿದ್ದ. ದಿಃ13.01.2022 ರಂದು ಮ.12 ಗಂಟೆ ವೇಳೆಯಲ್ಲಿ ನಾನು ಲಾಡ್ಜ್ ನಲ್ಲಿ ಕೆಲಸ ಮಾಡುತ್ತಿರುವಾಗ ನಮ್ಮ ಸಿಬ್ಬಂದಿಗಳು ಪ್ರಜ್ವಲ್ ನಿಗೆ ಹೊಟೆಲ್ ನ ಹೊರಗಡೆ ಹೊಡೆಯುತ್ತಿದ್ದಾರೆ ಎಂದು ಹೇಳಿದಾಗ ನಾನು ಅಲ್ಲಿಗೆ ಹೋಗಿದ್ದೆ. ಆ ಕಾಲಕ್ಕೆ ಇಬ್ಬರು ವ್ಯಕ್ತಿಗಳು ಪ್ರಜ್ವಲ್ ನಿಗೆ ಹೊಡೆಯುತ್ತಿದ್ದರು ಅವರಿಗೆ ನಾನು ಏನಕ್ಕೆ ಹೊಡೆಯುತ್ತಿದ್ದೀರಾ ಎಂದು ಕೇಳಿದಾಗ ಅಲ್ಲಿಯೇ ಇದ್ದ ಪ್ರಜ್ವಲ್ ಇವರ ತಾಯಿ ಪ್ರಜ್ವಲ್ ನು ಸೋಮಶೇಖರನ ಹೆಂಡತಿಗೆ ಪೋನ್ ಮಾಡುತ್ತಿದ್ದ ಕಾರಣ ಅವರು ಹೊಡೆಯುತ್ತಿರುವುದಾಗಿ ಹೇಳಿದ್ದರು. ಆ ಇಬ್ಬರು ವ್ಯಕ್ತಿಗಳು ಪ್ರಜ್ವಲ್ ನಿಗೆ ಹೊಡೆಯುತ್ತಾ ನಮ್ಮ ಜೊತೆ ಬಾ ಎಂದು ಕರೆಯುತ್ತಿದ್ದರು. ಆಗ ಪ್ರಜ್ವಲ್ ನು ಯೂನಿಫಾರಂ ಅನ್ನು ಬದಲಿಸಿ ಬರುತ್ತೇನೆಎಂದು ಹೋಟೆಲ್ ಒಳಗಡೆ ಹೋಗಿದ್ದ. ಆಗ ನಾನು ಮತ್ತು ಇನ್ನೊಬ್ಬ ಸಿಬ್ಬಂದಿ ಶಶಿ ಪ್ರಜ್ವಲ್ ನೊಂದಿಗೆ ಹೋಟೇಲ್ ಒಳಗೆ ಹೋಗಿ ಆತನನ್ನು ವಿಚಾರಿಸಿದಾಗ ಪ್ರಜ್ವಲ್ ನು ನಾನು ಗೌರಮ್ಮ ಎನ್ನುವ ಮಹಿಳೆಗೆ ಪೋನ್

ಮಾಡುತ್ತಿದುದ್ದರಿಂದ ಅವರು ಹೊಡೆಯುತ್ತಿದ್ದಾರೆ ಅವರು ನನ್ನನ್ನು ಬಿಡುವುದಿಲ್ಲ ಸಾಯಿಸುತ್ತಾರೆ ಎಂದು ಹೇಳಿದ್ದ. ಆಗ ನಾವಿಬ್ಬರು ಪ್ರಜ್ವಲ್ ಗೆ ಸಮಾಧಾನ ಮಾಡಿದ್ದೆವು.

*2.* ಆಗ ನಾವು ಪ್ರಜ್ವಲ್ ನನ್ನು ಹೊರಗಡೆ ಕರೆದುಕೊಂಡು ಬರುತ್ತಿದ್ದಾಗ ನಾನು ಮತ್ತು ಶಶಿ ಮುಂದೆ ಬರುತ್ತಿದ್ದೆವು ಆಗ ಶಬ್ದ ಕೇಳಿದ್ದರಿಂದ ನಾವು ತಿರುಗಿ ನೋಡಿದಾಗ ಪ್ರಜ್ವಲ್ ನು ಕಟ್ಟಡದ ಮೇಲಿಂದ ಕೆಳಕ್ಕೆ ಬಿದಿದ್ದ. ತಕ್ಷಣ ನಾನು ಕಟ್ಟಡದಿಂದ ಕೆಳಕ್ಕೆ ಬಂದು ನೋಡಿದಾಗ ಪ್ರಜ್ವಲ್ ನ ಎಡ ಕೈ ಮತ್ತು ಎಡ ಕಾಲು ಶಕ್ತಿ ಇಲ್ಲದಂತೆ ಅಲುಗಾಡುತ್ತಿದ್ದವು ಮತ್ತು ಪ್ರಜ್ವಲ್ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ತಕ್ಷಣ ನಾವು ಪ್ರಜ್ವಲ್ ನನ್ನು ಆಟೋದಲ್ಲಿ ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ಹೋಟೆಲ್ ನಿಂದ ಕೆಳಗಡೆ ಹೋದರೆ ಆ ವ್ಯಕ್ತಿಗಳು ನನ್ನನ್ನು ಸಾಯಿಸಿಬಿಡುತ್ತಾರೆ ಎನ್ನುವ ಭಯದಿಂದ ಪ್ರಜ್ವಲ್ ಕಟ್ಟಡ ಮೇಲಿಂದ ಕೆಳಗೆ ಬಿದಿದ್ದ. ಅದೇ ದಿನ ಮ.*3* ಗಂಟೆ ವೇಳಗೆ ಪ್ರಜ್ವಲ್ ಮರಣಹೊಂದಿದ್ದ. ನಂತರ ದಿಃ*14.01.2022* ರಂದು ಪ್ರಜ್ವಲ್ ನ ಶವವನ್ನು ನನಗೆ ತೋರಿಸಿದ್ದರು. ಆ ಕಾಲಕ್ಕೆ ಶವ ಪಂಚನಾಮೆ ಕಾಲಕ್ಕೆ ಹಾಜರಿರುವಂತೆ ನನಗೆ ಹೇಳಿದ್ದರು. ಆ ಕಾಲಕ್ಕೆ ನಾನು ನೋಟಿಸ್ ಗೆ ಸಹಿ ಮಾಡಿದ್ದೆ. ಈಗ ನಾನು ನೋಡುತ್ತಿರುವ ನೋಟೀಸ್ ಅದೇ ಇದ್ದು ಅದರಲ್ಲಿನ ಸಹಿ ನನ್ನದು ಇದೆ. ಸದರಿ ನೋಟೀಸ್ ಅನ್ನು ನಿ.ಪಿ-*6* ಮತ್ತು ಸಹಿಯನ್ನು ನಿ.ಪಿ-*6(ಎ)* ಎಂದು ಗುರುತಿಸಿದೆ. ಆ ದಿನ ಬೆ.*9.30* ರಿಂದ *11* ಗಂಟೆ ವರೆಗೆ ಶವ ಪಂಚನಾಮೆ ಮಾಡಿದ್ದರು. ಈಗ ನಾನು ನೋಡುತ್ತಿರುವ ಶವ ಪಂಚನಾಮೆ ಅದೇ ಇದ್ದು ಅದರಲ್ಲಿನ ಸಹಿ ನನ್ನದು ಇದೆ. ಸದರಿ ಶವ ಪಂಚನಾಮೆಯನ್ನು ನಿ.ಪಿ-*7* ಮತ್ತು ಸಹಿಯನ್ನು ನಿ.ಪಿ-*7(ಎ)* ಎಂದು ಗುರುತಿಸಿದೆ. ಶವ ಪಂಚನಾಮೆ ಕಾಲಕ್ಕೆ ಇನ್ನಿಬ್ಬರು ವ್ಯಕ್ತಿಗಳು ಹಾಜರಿದ್ದರು ಆದರೆ ಅವರ ಹೆಸರು ಗೊತ್ತಿಲ್ಲ.

3. ದಿಃ17.01.2022 ನಾನು ಆ ಘಟನೆ ಬಗ್ಗೆ ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ನಂತರ ದಿಃ07.07.2022 ರಂದು ನನ್ನನ್ನು ಪುನಃ ಪೋ.ಠಾಣೆಗೆ ಕರೆಸಿ ಒಬ್ಬ ವ್ಯಕ್ತಿಯನ್ನು ತೋರಿಸಿದಾಗ ಅದೇ ವ್ಯಕ್ತಿ ಪ್ರಜ್ವಲ್ ನಿಗೆ ಹೊಡೆಯುತ್ತಿದ್ದ ವ್ಯಕ್ತಿ ಎಂದು ಗುರುತಿಸಿದ್ದೆ. ಆ ಕಾಲಕ್ಕೆ ಸೋಮಶೇಖರ್ ಇವರನ್ನು ನನಗೆ ತೋರಿಸಿದ್ದರು. ಆ ಕಾಲಕ್ಕೆ ನಾನು ಹೇಳಿಕೆ ಕೊಟ್ಟಿದ್ದೆ. ದಿಃ10.10.2022 ರಂದು ರಂದು ನನ್ನನ್ನು ಪುನಃ ಪೋ.ಠಾಣೆಗೆ ಕರೆಸಿ ಒಬ್ಬ ವ್ಯಕ್ತಿಯನ್ನು ತೋರಿಸಿದಾಗ ಅದೇ ವ್ಯಕ್ತಿ ಸೋಮಶೇಖರ್ ಇವರೊಂದಿಗೆ ಪ್ರಜ್ವಲ್ ನಿಗೆ ಹೊಡೆಯುತ್ತಿದ್ದ ವ್ಯಕ್ತಿ ಎಂದು ಗುರುತಿಸಿದ್ದೆ. ಆ ಕಾಲಕ್ಕೆ ಮಹದೇವ ಇವರನ್ನು ನನಗೆ ತೋರಿಸಿದ್ದರು. ಆ ಕಾಲಕ್ಕೆ ನಾನು ಹೇಳಿಕೆ ಕೊಟ್ಟಿದ್ದೆ. ಪೋ.ಠಾಣೆಯಲ್ಲಿ ಹೇಳಿಕೆ ಕೊಟ್ಟ ಬಗ್ಗೆ ಮುಚ್ಚಳಿಕೆ ಪತ್ರಕ್ಕೆ ಸಹಿ ಹಾಕಿದ್ದೆ. ಈಗ ನಾನು ನೋಡುತ್ತಿರುವ ದಾಖಲೆ ಅದೇ ಇದ್ದು ಅದರಲ್ಲಿನ ಸಹಿ ನನ್ನದೇ ಇದೆ. ಸದರಿ ದಾಖಲೆಯನ್ನು ನಿ.ಪಿ-8 ಮತ್ತು ಸಹಿಯನ್ನು ನಿ.ಪಿ-8(ಎ) ಎಂದು ಗುರುತಿಸಿದೆ. ನಮ್ಮ ಲಾಡ್ಜ್ ನಲ್ಲಿ ಸಿ.ಸಿ.ಟಿ.ವಿ ಕ್ಯಾಮಾರಗಳು ಇವೆ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಸಮಯ ಕೋರಿದ್ದು ಸೂಕ್ತ ಕಾರಣ ಹೇಳದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು